15

# ಸಿದ್ಧತೆಯ ಅವಧಿ

## (ಮತ್ತಾಯ 3-4:11; ಮಾರ್ಕ 1:1-13; ಲೂಕ 2:40-4:13; ಯೋಹಾನ 1:19-28)

### I. ನಜರೇತಿನಲ್ಲಿ ಮೌನ ವರ್ಷಗಳು.

ಮೂವತ್ತು ವರ್ಷಗಳ ವರೆಗೆ ಯೇಸುವಿನ ಮನೆಯು ನಜರೇತಿನಲ್ಲಿ ಇತ್ತು. ಚಿಕ್ಕ ಗ್ರಾಮವು ಯೂದಾಯದ ಹೆಚ್ಚು ಸಂಸ್ಕೃತ ಯೆಹೂದ್ಯರಿಂದಲೂ ಯೆರೂಸಲೇಮಿನ ವರಿಂದಲೂ ತಿರಸ್ಕರಿಸಲ್ಪಡುತ್ತಿದ್ದರು; ಮತ್ತು ಯೇಸುವು ಅಸ್ಪಷ್ಟತೆಯಿಂದ ಉದ್ಭವಿಸು ವಾಗ, ಆತನೂ ಮತ್ತು ಆತನ ಶಿಷ್ಯರೂ ತಿರಸ್ಕಾರ ರೀತಿಯಲ್ಲಿ ನಜರೇತಿನವರು ಎಂದು ಕರೆಯಲ್ಪಟ್ಟರು.

**1. ಸುವಾರ್ತೆಗಳ ಸ್ವಯಂ - ನಿಯಂತ್ರಣ.**-ಆತನ ಗೋದಲಿಯ ಸುತ್ತಲಿನ ಘಟನೆಗಳನ್ನು ಕೂಡಿಸುವುದರೊಂದಿಗೆ, ಆತನ ಸೇವೆ ಮತ್ತು ಆತನ ಶಿಲುಬೆಯ ಘಟನೆಗಳೊಂದಿಗೆ ಗುರುತಿಸಲ್ಪಟ್ಟ ವಿರೋಧಾಭಾಸವು ಮೂವತ್ತು ವರ್ಷಗಳ ಮೌನವಾಗಿರುವಿಕೆಯಾಗಿದೆ. ಪ್ರೇರೇಪಣೆಯಿಲ್ಲದ ಆತ್ಮ ಚರಿತ್ರೆಯ ಲೇಖಕರು ಹಾಗೆ ಮಾಡುವುದಿಲ್ಲ. ಬೆಳೆಯುತ್ತಿರುವ ಪ್ರತಿಭಾವಂತನ ಬಾಲ್ಯದ ಘಟನೆಗಳನ್ನು, ಸಂಕೇತಗಳನ್ನೂ ಮತ್ತು ವಾಗ್ದಾನಗಳನ್ನೂ ಸಂಗ್ರಹಿಸುವುದನ್ನು ಅವರು ಪ್ರೀತಿಸುವರು. ಈ ಭಾವನೆಯಲ್ಲಿ ಅಪೋಕ್ರಿಫ ಸುವಾರ್ತೆಗಳ ಗ್ರಂಥಕರ್ತರು ಯೇಸುವಿನ ಮೊದಲಿನ ವರ್ಷಗಳ ಬಗ್ಗೆ ಬರೆದಿರುವರು. ಅವರು ತಮ್ಮ ಪುಟಗಳನ್ನು ಅಸಾಧಾರಣವಾದ ಮತ್ತು ಅಮೂಲ್ಯವಾದ ಅದ್ಭುತಕಾರ್ಯಗ ಳನ್ನು ಆತನನ್ನು ಗೌರವಿಸಲು ತುಂಬಿಸಿದ್ದಾರೆ, ಆದರೆ ನಿಜವಾಗಿಯೂ ಆತನನ್ನು ಅಗೌರವಿಸುತ್ತವೆ. ನಮ್ಮ ಸವಾರ್ತೆಗಳ ಸ್ವ - ನಿಯಂತ್ರಣವು ಅವುಗಳ ಕಥೆಯ ವಾಸ್ತ ವಿಕತೆ ಮತ್ತು ಗ್ರಂಥಕರ್ತರ ಪ್ರೇರಣೆ ಎರಡರ ರುಜುವಾತಾಗಿದೆ.

**2. ಶೈಕ್ಷಣಿಕ ಪ್ರಭಾವಗಳು.**-ಯೇಸುವು ಆಲಸ್ಯತನದಲ್ಲಿಯಾಗಲೀ ಇಲ್ಲವೇ ಅಜ್ಞಾನದಲ್ಲಿಯಾಗಲೀ ಬೆಳೆಯಲಿಲ್ಲ. ಆತನು ಒಬ್ಬ ಬಡಗಿಯಾಗಿದ್ದನು, ಮತ್ತು ಪ್ರಖ್ಯಾತಿ ಹೊಂದಿದ ಬಡಿಗನ ಮಗನಾಗಿದ್ದನು (ಮತ್ತಾಯ 13:55; ಮಾರ್ಕ 6:3). ಪ್ರತಿಯೊಬ್ಬ ಯೆಹೂದಿ ಬಾಲಕ ವ್ಯವಹಾರವನ್ನು ಕಲಿತು ಕೊಳ್ಳುತ್ತಿದ್ದನು. ರೈತವರ್ಗದವರು ಓದಲು ಮತ್ತು ಬರೆಯಲು ಶಕ್ತರಾಗಿದ್ದರು. ಆತನ ವಿದ್ಯಾಭ್ಯಾಸ ಮಾಡದಿರುವಿಕೆಯ ಉಲ್ಲೇಖದ (ಯೋಹಾನ 7:15) ಅರ್ಥವು ಆತನು ರಬ್ಬಿಗಳ ಶಾಲೆಗಳಲ್ಲಿ ಶಿಕ್ಷಣ ಹೊಂದದಿರುವುದಕ್ಕೆ ಮಾತ್ರ ಅನ್ವಯವಾಗುತ್ತದೆ; ನಾವು ಹೇಳುವಂತೆ ಆತನು ಕಾಲೇಜಿನಲ್ಲಿ ಕಲಿತವನಲ್ಲ. ಆತನು ಮೂರು ಭಾಷೆಗಳನ್ನು ತಿಳಿದವನಾಗಿದ್ದನು: ಅರಮಾಯಿಕ್, ಆತನ ಮಾತೃಭಾಷೆ; ಹಿಬ್ರೂ, ಪರಿಶುದ್ಧ ಬರಹಗಳ ಮೂಲಭಾಷೆ; ಮತ್ತು ಗ್ರೀಕ್ ಸಾಹಿತ್ಯ ಭಾಷೆ. ಪರಿಶುದ್ಧ ಬರಹಗಳ ಪೂರ್ಣ ಪ್ರತಿಯೊಂದನ್ನು ಹೊಂದಿಕೊಳ್ಳುವಷ್ಟು ಶ್ರಿಮಂತನಾಗಿರದಿದ್ದರೂ, ಸಭಾಮಂದಿರವು ಅವುಗಳನ್ನು ನೋಡಲು ಅವಕಾಶಕೊಡುತ್ತಿತ್ತು; ಅವುಗಳ ಆಯಲ್ಪಟ್ಟ ಭಾಗಗಳು ಬಡಿಗನ ಮನೆಯಲ್ಲಿ ಸ್ವಂತವಾದವುಗಳಾಗಿ ಇರುತ್ತಿದ್ದವು.

**3. ಯೆರೂಸಲೇಮಿಗೆ ಆತನ ಸಂದರ್ಶನ.**-ಶಿಕ್ಷಣದ ಒಂದು ಮಹತ್ವದ ಸಾಧನವು ಹೇಳಲ್ಪಟ್ಟಿದೆ (ಲೂಕ 2:46-51). ಆತನ ತಂದೆ ತಾಯಿಗಳು ಯೆರೂಸಲೇಮಿಗೆ ಪಸ್ಕ ಹಬ್ಬಕ್ಕೆ ಪ್ರತೀವರ್ಷ ಹೋಗುತ್ತಿದ್ದರು. ಐತಿಹಾಸಿಕ ಸಂಬಂಧಗಳಿಂದ ಐಶ್ವರ್ಯವುಳ್ಳದ್ದಾಗಿರುವ ದೇಶದ ಮುಖಾಂತರ ಪ್ರಯಾಣವು ಅವರಿಗೆ ಎಂಭತ್ತು ಮೈಲುಗಳನ್ನು ತೆಗೆದುಕೊಳ್ಳುತ್ತಿತ್ತು. ಯೆರೂಸಲೇಮು ಅದರ ಜನರಿಂದ ರಾಜಧಾನಿಯಂತೆ ಪ್ರೀತಿಸಲ್ಪಡುತ್ತಿತ್ತು. ಅನೇಕ ದೇಶಗಳಿಂದ, ಅನೇಕ ಭಾಷೆಗಳನ್ನಾಡುವ ಯಾತ್ರಿಕರು ಅದರ ಬೀದಿಗಳಲ್ಲಿ ನಡೆಯುತ್ತಿದ್ದರು ಮತ್ತು ಅದರ ದೇವಾಲಯದಲ್ಲಿ ತುಂಬಿತುಳುಕುತ್ತಿದ್ದರು, ಚುರುಕಾದ, ಆಸಕ್ತಿಯುಳ್ಳ ಬಾಲಕನಿಗೆ ಅಂಥ ವಾರ್ಷಿಕ ಪ್ರಯಾಣವು ಒಂದು ತರಬೇತಿಯಾಗಿತ್ತು. ಮೂವತ್ತು ವರ್ಷಗಳಲ್ಲಿ ಒಂದು ಸಲ ಮಾತ್ರವೇ ಅಸ್ಪಷ್ಟತೆಯ ತೆರೆಯು ಮೇಲಕ್ಕೆತ್ತಲ್ಪಟ್ಟಿತ್ತು. ಹನ್ನೆರಡನೆಯ ವಯಸ್ಸು ಯೆಹೂದಿ ಬಾಲಕನಿಗೆ ಬದಲಾವಣೆಯ ಹಂತವಾಗಿರುವುದು. ಹನ್ನೆರಡನೆಯ ವರ್ಷದವನಾದಾಗ ಒಂದು ವೃತ್ತಿಯನ್ನು ಕಲಿಯಲು ಪ್ರಾರಂಭಿಸುವನು; "ಬೆಳೆದವನು" ಎಂದು ಕರೆಯಲ್ಪಡುವನು; ಅವನ ತಂದೆಯಿಂದ ಅವನು ಮಾರಲ್ಪಡಲಾರನು; ಹಿಬ್ರು ಧರ್ಮಶಾಸ್ತ್ರ ವಚನಗಳುಳ್ಳ ಚರ್ಮದ ಚೀಲವನ್ನು ಧರಿಸಲು ಪ್ರಾರಂಭಿಸುವನು; "ಧರ್ಮಶಾಸ್ತ್ರದ ಮಗನು" ಎಂದು ಕರೆಯಲ್ಪಡುವನು. ಈ ಸಂದಿಗ್ಧ ವಯಸ್ಸಿನಲ್ಲಿ ಯೇಸವು ಯೆರೂಸಲೇಮಿಗೆ ತನ್ನ ಪ್ರಥಮ ಪ್ರಯಾಣ ಮಾಡಿದನೆಂದು ತೋರುತ್ತದೆ. ಆತನು ತಪ್ಪಿಸಿಕೊಂಡಾಗ ಜೊತೆಯವರು ಮನೆಯ ಕಡೆಗೆ ಒಂದು ದಿನದ ಪ್ರಯಾಣಮಾಡಿದ್ದರು. ಆತನ ತಂದೆತಾಯಿಗಳು ಹಿಂದಿರುಗಿ ಒಂದು ಇಡೀ ದಿನ ಯೆರೂಸಲೇಮಿನಲ್ಲಿ ವ್ಯಾಕುಲತೆಯಿಂದ ಹುಡುಕಿದರು. ಕೊನೆಗೆ ಅವರು ಆತನನ್ನು ಬೀದಿಯ ಮಕ್ಕಳೊಂದಿಗೆ ಅಲ್ಲ; ಸ್ಥಳಗಳನ್ನ ನೋಡುವುದರಲ್ಲಿ ಅಲ್ಲ; ಆದರೆ ದೇವಾಲಯದಲ್ಲಿ ಧರ್ಮಶಾಸ್ತ್ರ ಪಂಡಿತರೊಂದಿಗೆ ಅವರ ಮಾತುಗಳನ್ನು ಕೇಳುತ್ತ ಅವರಿಗೆ ಪ್ರಶ್ನೆ ಮಾಡುತ್ತ ಇರುವಲ್ಲಿ ಕಂಡುಕೊಂಡರು. "ನೀವು ನನ್ನನ್ನು ಹುಡುಕಿದ್ದೇನು? ನಾನು ನನ್ನ ತಂದೆಯ ಮನೆಯಲ್ಲಿ ಇರಬೇಕಾದದ್ದು ನಿಮಗೆ ತಿಳಿಯಲಿಲ್ಲವೇ?"[1] ಇಂಥವುಗಳು ಮೊದಲು ದಾಖಲೆಯಾದ ಆತನ ಮಾತುಗಳಾಗಿರುವವು, ಮತ್ತು ಅವು ಆತನ ಇಡೀ ಜೀವನದ ಪ್ರಮುಖ ಮಾತುಗಳಾಗಿರುವವು. ಆತನು ಅವರೊಂದಿಗೆ ನಜರೇತಿಗೆ ಹಿಂದಿರುಗಿದರೂ ಮತ್ತು ಅವರಿಗೆ ಅಧೀನನಾಗಿದ್ದರೂ, ಆಗಾಗ ಆತನು ಯೆರೂಸಲೇಮಿಗೆ ಸಂದರ್ಶಿಸಿದ್ದು ಆತನ ಗುಣಲಕ್ಷಣ ರಚನೆಯಲ್ಲಿಯೂ ಮತ್ತು ಆತನ ಯೋಜನೆಗಳನ್ನು ಪಕ್ವಗೊಳಿಸುವುದಕ್ಕೂ ಮಹತ್ವದ ಪ್ರಭಾವ ಬೀರಿತ್ತು.

ಯಾವಾಗ ಮತ್ತು ಹೇಗೆ ಯೇಸುವು ತನ್ನ ದೈವಿಯ ಸ್ವಭಾವದ ಮತ್ತು ವ್ಯಕ್ತಿತ್ವದ ಬಗ್ಗೆ ಅರುಹುವುಳ್ಳವನಾದನು? ಎಂದು ಪ್ರಶ್ನಿಸದೇ ಇರಲಾರೆವು? ಪಕ್ಕನೇ ಅದು ಆತನ ಮೇಲೆ ಹೊಳೆಯಿತೋ ಇಲ್ಲವೇ ಕ್ರಮೇಣವಾಗಿ ಸಾಮಾನ್ಯ ಮಗುವಿನಲ್ಲಿ ಅರುಹುವುಳ್ಳ ವ್ಯಕ್ತಿತ್ವದಂತೆ ಉದಯವಾಯಿತೋ? ಆತನ ಜನನದ ಅದ್ಭುತಗಳ ಬಗ್ಗೆ ಮನೆಯಲ್ಲಿಯ ಮೌನ ಮಾತುಗಳಿಂದ ಬಂದಿತೋ ಅಥವಾ ಆತನೊಳಗಿನಿಂದ ಉದಯವಾಯಿತೋ? ಇಂಥ ಪ್ರಶ್ನೆಗಳು ನಮ್ಮ ಆಳದ ಹಿಂದೆ ಮತ್ತು ಪ್ರಕಟಿಸಲ್ಪಟ್ಟಿದ್ದನ್ನು ದಾಟಿ ನಮ್ಮನ್ನು ತೆಗೆದುಕೊಂಡು ಹೋಗುತ್ತವೆ. ಹೀಗಿದ್ದರೂ ಆತನು ಹನ್ನೆರಡು ವರ್ಷದವನಾದಾಗ ತನ್ನ ದೈವಿಕ ವಂಶದ ಬಗ್ಗೆ ಸಂಪೂರ್ಣವಾಗಿ ಅರುಹುವುಳ್ಳವನಾಗಿದ್ದಾನೆಂಬುದು ಸ್ಪಷ್ಟವಾಗುತ್ತದೆ.

**4. ಮೌನವರ್ಷಗಳ ಪಾಠಗಳು.**-ಬಹಿರಂಗ ರೀತಿಯಲ್ಲಿ ಯೇಸುವು ತನ್ನ ತಂದೆಯ ಕಾರ್ಯದಲ್ಲಿ ಮೂರು ವರ್ಷಗಳ ಕಾಲ ಮಾತ್ರ ಇದ್ದನು; ಆದಾಗ್ಯೂ ಜನ ಸಮೂಹಗಳಿಗೆ ಬೋಧಿಸುವಾಗ ಅಥವಾ ನಮ್ಮ ಪಾಪಗಳಿಗಾಗಿ ಸಾಯುತ್ತಿದ್ದಾಗಿನಂತೆಯೇ, ಆತನು

ತನ್ನ ಮೌನವರ್ಷಗಳಲ್ಲಿಯೂ ನಿಜವಾಗಿಯೂ ದೇವರ ಕಾರ್ಯವನ್ನು ಮಾಡುತ್ತಿದ್ದನು. ಯೇಸುವು ಮಾಡಿದ್ದು ಆತನಿದ್ದಂಥಹ ರೀತಿಯಿಂದ ಅಳೆಯಲ್ಪಡುತ್ತದೆ. ಬೆಳವಣಿಗೆಯ ಮೂವತ್ತು ವರ್ಷಗಳ ಮುಖಾಂತರವಾಗಿ ಆತನು ಏನಾಗಿದ್ದನೋ ಅದಾದನು: "ಜ್ಞಾನದಲ್ಲಿಯೂ ದೇಹಬಲದಲ್ಲಿಯೂ ವೃದ್ಧಿಯಾಗುತ್ತ ಬಂದನು; ಮತ್ತು ದೇವರ ಮತ್ತು ಮನುಷ್ಯರ ದಯೆಯು ಆತನ ಮೇಲೆ ಹೆಚ್ಚಾಗುತ್ತ ಬಂದಿತು."[2] ಜಗತ್ತಿನ ಅಗತ್ಯತೆ, ಗುಣಲಕ್ಷಣ; ನಜರೇತಿನ ಅಸ್ಪಷ್ಟತೆಯೊಳಗಿಂದ ಬಂದಂಥ ಯೌವನ ಪ್ರಾಯವನ್ನು ಒದಗಿಸುವಲ್ಲಿ ಯಾವ ಸಿದ್ಧತೆಯ ವರ್ಷಗಳು ವ್ಯರ್ಥವಾಗಲಿಲ್ಲ.

## II. ಸ್ನಾನಿಕನ ಸೇವೆ.

**1. ಪ್ರವಾದನೆಯ ಪುನರುಜ್ಜೀವನ.**-ಬಹಿರಂಗ ಪ್ರವಾದನೆಯ ಕೊನೆಯ ಧ್ವನಿಯಿಂದ ನಾಲ್ಕು ಶತಮಾನಗಳು ದಾಟಿಹೋದವು. ಕೊನೆಯ ಧ್ವನಿಯ ಹಿಬ್ರು ಪ್ರವಾದಿಯು (ಮಲಾಕಿಯ 4:5, 6), ಹಾಗೆಯೇ ಯೆಶಾಯನು (40:3), ಮೆಸ್ಸೀಯನ ಮುಂದೂತನ ಬಗ್ಗೆ ಮುಂತಿಳಿಸಿದನು. ಸಾಲಿತಿಳಿಸುವಿಕೆಯಲ್ಲಿ ಮತ್ತು ಪುನಃ ಅವನ ಜನನದಲ್ಲಿ, ಯೋಹಾನನು ಮುಂದೂತನಂತೆ ತೋರಿಸಲ್ಪಟ್ಟಿದ್ದಾನೆ. ಅವನ ಜನನ ಮತ್ತು ಸುನ್ನತಿಯ ವಿವರಣೆಗಳ ವರದಿಯ ನಂತರ, ಒಂದು ವಚನವು (ಲೂಕ 1:80) ಅವನ ಬಗ್ಗೆ ಮೂವತ್ತು ವರ್ಷಗಳಿಗಾಗಿ ದಾಖಲೆಯಾದದ್ದೆಲ್ಲವನ್ನೂ ಒಳಗೊಂಡಿರುತ್ತದೆ. ಆತನು ಜನನದಿಂದ ನಾಜೀರನಾಗಿರಬೇಕಾಗಿತ್ತು[3] (ಲೂಕ 1:15; ಹೋಲಿಸು ಅರಣ್ಯಕಾಂಡ 6:1-5); ಮತ್ತು ಅವನು ಅರಣ್ಯದಿಂದ ಬಂದಾಗ ಅವನು ಪುರಾತನ ಹಿಬ್ರೂ ಪ್ರವಾದಿಗಳ ಒರಟಾದ ಉಡುಪಿನಲ್ಲಿ ಬಂದನು. ಅವನ ದೀರ್ಘಕಾಲದ ಏಕಾಂತ ವಾಸವು ಸ್ವಯಂಶಿಸ್ತುಪಡಿಸಿಕೊಳ್ಳುವಿಕೆಯಲ್ಲಿಯೂ ಸಮಯದ ಪಾಪಿಗಳ ಮೇಲೆ ಧ್ಯಾನದ ಮೇಲೆಯೂ ಮೆಸ್ಸೀಯನ ಮತ್ತು ಆತನ ರಾಜ್ಯದ ಪ್ರವಾದಿಕ ದರ್ಶನಗಳ ಮೇಲೆಯೂ ಕಳೆಯಲ್ಪಟ್ಟಿತು ಎಂಬುದರಲ್ಲಿ ಸಂಶಯವಿಲ್ಲ. ಅವನು ಪಟ್ಟಣಗಳನ್ನು ಹುಡುಕಲಿಲ್ಲ, ಆದರೆ ಯೊರ್ದನಿನ ಜನನಿಬಿಡ ಸ್ಥಳದಲ್ಲಿ ಪ್ರಸಂಗಿಸಿದನು.

**2. ಅವನ ಸೇವೆಯ ಬಲ.**-ಅವನ ಎರಡು ವರ್ಷಗಳ ಸೇವೆಯು ಐವತ್ತರ ಹೆಚ್ಚಾದ ಸೇವೆಗಳಿಗಿಂತ ಹೆಚ್ಚಾದ್ದದನ್ನು ಸಾಧಿಸಿತು. ಅವನು "ಅದ್ಭುತ ಕಾರ್ಯಗಳನ್ನು ಮಾಡಲಿಲ್ಲ" (ಯೋಹಾನ 10:41), ಆದೆ ಜನಾಂಗವೇ ಅವನ ಪಾದಗಳ ಬಳಿಯಲ್ಲಿತ್ತು. ಗ್ರಾಮದ ಗ್ರಾಮ್ಯ ಜನರಷ್ಟೇ ಅಲ್ಲ, ಆದರೆ ರಾಜಧಾನಿಯ ಸುಸಂಸ್ಕೃತ ಶಾಸ್ತ್ರಿಗಳೂ ಫರಿಸಾಯರೂ ಈ ಎರಡನೆಯ ಎಲೀಯನ ಮಾತುಗಳನ್ನೂ ಕೇಳಲು ಓಡಿಬಂದರು. ಅಂತಿಮವಾಗಿ ಇಲ್ಲಿ ಒಬ್ಬ ಮನುಷ್ಯನು ತಮ್ಮ ಪ್ರಾಣಗಳಿಗೆ ಸಂದೇಶದೊಂದಿಗೆ ಇದ್ದಾನೆ ಎಂದು ಜನರು ಭಾವಿಸಿದರು. ಅಂದಿನ ಬೋಧಕರಂತೆ, ಅವನು ಮರುಗು ಸೋಪು ಜೀರಿಗೆಗಳ ಪ್ರಶ್ನೆಗಳೊಂದಿಗೆ ಇಲ್ಲವೇ ಸಬ್ಬತ್ತ್ ದಿನದ ಪ್ರಯಾಣದ ದೂರದ ಬಗ್ಗೆ ನಿರತನಾಗಿರಲಿಲ್ಲ. ಹುರುಳಿಲ್ಲದ್ದರಿಂದ ವಾಸ್ತವಿಕತೆಗೆ ಹಿಂದಿರುಗಿ ಬರಬೇಕೆಂದು ಜನಾಂಗವನ್ನು ಕರೆಯುವುದು ಅವನ ನಿಯೋಗದ ಭಾಗವಾಗಿತ್ತು. ಸಿಪಾಯಿಗಳ ಹಿಂಸೆಯನ್ನು ಸುಂಕದವರ ಸುಲಿಗೆಯನ್ನು, ಫರಿಸಾಯರ ಕಪಟತನವನ್ನು ಎಲ್ಲರ ಸ್ವಾರ್ಥವನ್ನು ಕುರಿತು ಗದರಿಸಿದನು (ಲೂಕ 3:10-14).

**3. ಸಮೀಪದಲ್ಲಿ ದೇವರ ರಾಜ್ಯ.**-ಯೋಹಾನನ ಸೇವೆಯು ತನ್ನಲ್ಲಿಯೇ ಮುಗಿದು ಹೋಗ ಲಿಲ್ಲ. ಅದು *ಸಿದ್ಧತೆಯಾಗಿತ್ತು.* "ಪರಲೋಕ ರಾಜ್ಯವು ಸಮೀಪವಾಯಿತು; ದೇವರ ಕಡೆಗೆ ತಿರುಗಿಕೊಳ್ಳಿರಿ"[4] ಎಂಬುದು ಅದರ ಭಾರವಾಗಿತ್ತು. ಅವನು ತಾನು ಕ್ರಿಸ್ತನಲ್ಲ ಎಂದು ಹೇಳಿದನು, ತಾನು ಸಿದ್ಧತೆಯ ಕೂಗು ಎಂದು ಹೇಳಿಕೊಂಡನು (ಯೋಹಾನ

1:19-23). ತನ್ನ ಸಂದೇಶವನ್ನು ಒತ್ತಿಹೇಳುವುದಕ್ಕಾಗಿ ಅವನು "ಕ್ಷಮಾಪಣೆಗಾಗಿ" ಮತ್ತು "ಮಾನಸಾಂತರದ" ಬಾಪ್ತಿಸ್ಮದೊಂದಿಗೆ ಬಾಪ್ತಿಸ್ಮ ಮಾಡಿಸಿದನು; ಅದೇ ಸಮಯದಲ್ಲಿ "ಬರಲಿಕ್ಕಿದ್ದಾತನ ಮೇಲೆ" ಮತ್ತು ಪರಿಶುದ್ಧಾತ್ಮನಿಂದ ಬಾಪ್ತಿಸ್ಮ ಮಾಡಿಸಲಿಕ್ಕಿದ್ದಾತನ ಮೇಲೆ ನಂಬಿಕೆಯಿಡಬೇಕೆಂದು ಜನರನ್ನು ಕರೆದನು (ಮಾರ್ಕ 1:7, 8; ಹೋಲಿಸು ಅಪೊಸ್ತಲರ ಕೃತ್ಯಗಳು 19:4). ನಿದ್ರಿಸುತ್ತಿದ್ದ ಜನಾಂಗವನ್ನು ಎಚ್ಚರಿಸಲು, ಅದರ ಮನಸ್ಸಾಕ್ಷಿಯನ್ನು ಚುರುಕುಗೊಳಿಸಲು, ಮೆಸ್ಸೀಯ ನಿರೀಕ್ಷೆಯ ಜ್ವಾಲೆಯನ್ನು ಹೊತ್ತಿಸಲು, ಮೊದಲು ಅದನ್ನು ತನ್ನ ಮೇಲೆ ಕೇಂದ್ರೀಕರಿಸಿಕೊಂಡನು ಮತ್ತು ಆಮೇಲೆ ಅದನ್ನು ಯೇಸುವಿಗೆ ಹಸ್ತಾಂತರಿಸಿದನು - ಅವನ ಅಲ್ಪ ಸೇವೆಯ ಉದ್ದೇಶ ಮತ್ತು ಪರಿಣಾಮವು ಅಂಥದ್ದಾಗಿತ್ತು.

**4. ಯೇಸುವಿನ ಬಾಪ್ತಿಸ್ಮ.**-ಯೇಸುವಿನ ಬಾಪ್ತಿಸ್ಮದೊಂದಿಗೆ ಪರಾಕಾಷ್ಠತೆ ಬಂದಿತು. ಪಾಪಭರಿತ ಗುಂಪಿನೊಂದಿಗೆ ಒಂದು ದಿನ ಪಾಪರಹಿತ ಮರಿಯಳ ಮಗನು ಬಂದನು. ಅವರು ಎಂದಾದರೂ ಸಂದರ್ಶಿಸಿದ್ದರೋ ಎಂಬುದನ್ನು ನಾವರಿಯೆವು. ಯೋಹಾನನು ಆತನನ್ನು ಮೆಸ್ಸೀಯನಂತೆ ತಿಳಿದಿರಲಿಲ್ಲವೆಂಬುದು ನಿಶ್ಚಿತ (ಯೋಹಾನ 1:31-34). ಆದರೆ ಫರಿಸಾಯರನ್ನೂ ಅರಸನನ್ನೂ ಎದುರಿಸಬಲ್ಲ ಸಿಂಹದಂತಿದ್ದ ಪ್ರವಾದಿಯು ಸರಿಗಟ್ಟಲಾಗದ ಯೇಸುವಿನ ಮುಂದೆ ಆಳವಾದ ದೀನತೆಯಿಂದ ತಲೆಬಾಗಿದನು: "ನಾನು ನಿನ್ನಿಂದ ಸ್ನಾನಮಾಡಿಸಿಕೊಳ್ಳತಕ್ಕವನಾಗಿರುವಲ್ಲಿ ನೀನು *ನನ್ನ ಬಳಿಗೆ ಬರುವದೇನು?*"[5] ಯೇಸುವಿನ ಬಾಪ್ತಿಸ್ಮವು ನಮ್ಮದರಂತಿರುವುದಿಲ್ಲ; ಅದು "ಮಾನಸಾಂತರದ" ಇಲ್ಲವೇ "ಕ್ಷಮಾಪಣೆಗಾಗಿರುವ" ಬಾಪ್ತಿಸ್ಮವಲ್ಲ. ಆದಾಗ್ಯೂ ಅದು ಯೋಹಾನನಿಗೂ ಯೇಸುವಿಗೂ ಇಬ್ಬರಿಗೂ ಅತೀಯಾದ ಮಹತ್ವದೊಂದಿಗೆ ಧರಿಸಲ್ಪಟ್ಟಿತ್ತು. ಯೋಹಾನನಿಗೆ ತೆರೆಯಲ್ಪಟ್ಟ ಆಕಾಶ, ಆತ್ಮನ ಇಳಿದು ಬರುವಿಕೆ, "ಈತನು ನನ್ನ ಕುಮಾರನು"[6] ಎಂಬ ದೈವಿಕ ವಾಣಿಯು ಈತನು ಮೆಸ್ಸೀಯ ನಾಗಿದ್ದಾನೆ, ಈತನ ಮುಂದೆ ತಾನು ಕಡಿಮೆಯಾಗಬೇಕು ಎಂಬುದರಲ್ಲಿ ಸಂಶಯ ಉಳಿಯಲಿಲ್ಲ. ನಮಗಿರುವಂತೆ, ಯೇಸುವಿಗೆ ಬಾಪ್ತಿಸ್ಮವು ಜೀವನದಲ್ಲಿ ಒಂದು ಸಂದಿಗ್ಧ ಪರಿಸ್ಥಿತಿಯನ್ನು ಗುರತಿಸಿತು; ಆತ್ಮನು ಕೊಡಲ್ಪಟ್ಟನು; ಆತನ ದೈವಿಕ ಪುತ್ರತ್ವವು ಕೊಡಲ್ಪಟ್ಟಿತು. "ನೀರಿನಲ್ಲಿ ಮುಳುಗುವ ಮೊದಲು ಪವಿತ್ರನೂ ಶುದ್ಧನೂ ಆಗಿರುವ ಆತನು ತನ್ನ ಮುಖಭಾವದಲ್ಲಿ ಉನ್ನತ ಮಹಿಮೆಯ ಬೆಳಕಿನೊಂದಿಗೆ ಅವುಗಳಿಂದ ಮೇಲೆದ್ದನು. ಆತನು ಹಿಂದಿನ ಜೀವನವು ಮುಗಿಯಿತು; ಒಂದು ನೂತನ ಯುಗವು ತೆರೆಯಲ್ಪಟ್ಟಿತು. ಅದು ಒಂದು ನೂತನ ಜೀವನದಲ್ಲಿ ಆತನ ಪ್ರವೇಶದ ನಿಜವಾದ ಚಲನವಲನವಾಗಿತ್ತು. ಗತಿಸಿದ ವರ್ಷಗಳು ಯೊರ್ದನಿನ ನೀರಿನಲ್ಲಿ ಹೂಣಿಡಲ್ಪಟ್ಟವು. ಮನುಷ್ಯ ಕುಮಾರನಾದ ಯೇಸುವಿನಂತೆ ಆತನು ಅದರಲ್ಲಿ ಪ್ರವೇಶಿಸಿದನು; ಆತನು ಅದರೊಳಗಿಂದ ದೇವರ ಕ್ರಿಸ್ತನಂತೆ ಎದ್ದು ಬಂದನು."[7]

**5. ಶೋಧನೆ.**-ಈಗ ಯೇಸುವು ತನ್ನ ಮಹಾ ಸೇವೆಯ ಹೊಸ್ತಿಲಿನಲ್ಲಿದ್ದಾನೆ. ಮೂವತ್ತು ವರ್ಷಗಳ ಮುಖಾಂತರ ಆತನ ಮಾನವ ಸ್ವಭಾವವು ಯೋಗ್ಯವಾದ ದೈವಿಕ ಸಾಧನವಾಗಿ ಪ್ರಬುದ್ಧತೆಗೆ ಬಂದಿದೆ. ಆತನ ಯೋಜನೆಗಳೂ ಸಹ ಪ್ರಬುದ್ಧ ತೆಗೆ ಬಂದಿವೆ. ಅಂತ್ಯದವರೆಗೆ ಅವುಗಳನ್ನು ಮುನ್ನಡಿಸಿಕೊಂಡು ಹೋಗಲು ಆತನಿಗೆ ಧೈರ್ಯವಿದೆಯೇ? ಆ ಪ್ರಶ್ನೆಗೆ ಶೋಧನೆಯು ಉತ್ತರ ಕೊಡಬೇಕಾಗಿತ್ತು. ಅದಕ್ಕೆ ಜೀಗದ ಕೈಯು ಅದ್ಭುತಗಳನ್ನು ಮಾಡುವ, ರಾಜಕೀಯ ಮೆಸ್ಸೀಯನ ಬಗ್ಗೆ ಯೆಹೂದಿ ನಿರೀಕ್ಷೆಯಲ್ಲಿ ಕಂಡು ಬರುತ್ತದೆ. ಶೋಧಕನು ಬಾಹ್ಯ ರೂಪದಲ್ಲಿ ಬಂದನೋ; ಅಥವಾ ಅವನು ಬಹಳ ಸಲ, ಯಶಸ್ವಿಯಾಗಿ ನಮ್ಮ ಮೇಲೆ ದಾಳಿಮಾಡುವಂತೆ ಆಂತರಿಕ,

ಪಾಪಭರಿತ ಸೂಚನೆಯೊಂದಿಗೆ ಅವನು ಯೇಸುವಿನ ಮೇಲೆ ದಾಳಿಮಾಡಿದನೋ? ನಾವೆಂದೂ ತಿಳಿಯಲಾರೆವು. ಮೂರು ವಿಧಗಳಲ್ಲಿ ಶೋಧನೆಯು ಬಂದಿತೆಂಬುದನ್ನು ನಾವು ತಿಳಿದಿರುತ್ತೇವೆ:

*a. ದೈಹಿಕ ಹಸಿವೆಯ ಮುಖಾಂತರ.*-"ಈ ಕಲ್ಲುಗಳು ರೊಟ್ಟಿಯಾಗುವಂತೆ ಅಪ್ಪಣೆಕೊಡು"[8]; (1) ತನ್ನ ತಂದೆಯ ಜೋಪಾಸನೆಯ ಮೇಲೆ ಅವಿಶ್ವಾಸಪಡುವ, (2) ಸ್ವಾರ್ಥಕ್ಕಾಗಿ ತನ್ನ ಅದ್ಭುತಗಳನ್ನು ಮಾಡುವ ಶಕ್ತಿಯನ್ನು ಉಪಯೋಗಿಸುವ, ಒಂದು ಶೋಧನೆ. ಆದರೆ "ಸೇವೆ ಮಾಡಿಸಿಕೊಳ್ಳುವುದಕ್ಕಲ್ಲ ಆದರೆ ಸೇವೆ ಮಾಡುವುದಕ್ಕೆ"[9] ಬಂದಾತನು ತನ್ನ ದೈವಿಕ ವರಗಳನ್ನು ಸ್ವಾರ್ಥಸಾಧನೆಗಳಿಗೆ ಮಾರಿಕೊಳ್ಳುವುದರಿಂದ ಪ್ರಾರಂಭಿಸುವುದಿಲ್ಲ.

*b. ದೇವರಲ್ಲಿ ತನ್ನ ನಂಬಿಕೆಯ ಮುಖಾಂತರ.*-"ನೀನು ಕೆಳಕ್ಕೆ ದುಮುಕು."[10] ಅದು ಒಂದು ದೇವಾಲಯದ ಶಿಖರದಿಂದ. ಆದರೆ ದೇವರ ಪರಿಪಾಲನೆಯ ಬಗ್ಗೆ ಅಪನಂಬಿಕೆಯಿಡದಾತನು, ಜನಸಮೂಹಗಳನ್ನು ಚಕಿತಗೊಳಿಸಲು ಆ ಪರಿಪಾಲನೆಯನ್ನು ಸಂಶಯಕ್ಕೆ ಗುರಿಪಡಿಸಲಾರನು.

*c. ದೊರೆತನಕ್ಕಾಗಿ ತನ್ನ ಯೋಜನೆಗಳ ಮುಖಾಂತರ.*-ಯೇಸುವು ಮೆಸ್ಸೀಯನಾಗಿದ್ದಾನೆ. ಆತನು ಇಡೀ ಲೋಕದ ಮೇಲೆ ಆಳ್ವಿಕೆ ಮಾಡಬೇಕಾದವನು. "ನೀನು ನನಗೆ ಸಾಷ್ಟಾಂಗ ನಮಸ್ಕಾರ ಮಾಡಬೇಕು."[11] ಆತ್ಮಿಕ ಸಾಧನಗಳಿಂದ ನಿಧಾನವಾದ ಜಯಕ್ಕಾಗಿ ಕಾದುಕೊಂಡಿರಬೇಡ. ಪ್ರಾಪಂಚಿಕ ಆಯುಧಗಳನ್ನು ಉಪಯೋಗಿಸು, ನಿನ್ನ ಜನರ ಭೂಲೋಕದ ನಿರೀಕ್ಷೆಗಳಿಂದ ನೀನು ಒಪ್ಪಂದ ಮಾಡಿಕೋ. ನೀನು ಯಾವ ಸಿಂಹಾಸನಗಳನ್ನು ಜಯಿಸಲಾರಿ? ಮೊಹೆಮೆತನು ತನ್ನ ಖಡ್ಗವನ್ನು ಹಿರಿದಾಗ ಆ ಶೋಧನೆಗೆ ಒಪ್ಪಿಸಿಕೊಟ್ಟನು. ಮತ್ತು ಸಭೆಯು ಬಲಪ್ರಯೋಗಕ್ಕೆ ಕೈಹಾಕಿದಾಗ ಒಪ್ಪಿಸಿಕೊಟ್ಟಿರುತ್ತದೆ.

ಯೇಸುವು ಜಯಶಾಲಿಯಾದನು ಮತ್ತು ಶೋಧಕನು, "ಸ್ವಲ್ಪಕಾಲ ಆತನನ್ನು ಬಿಟ್ಟು ಹೊರಟುಹೋದನು"[12] ಮತ್ತು ಮತ್ಸರದ ಶಾಸ್ತ್ರಿಗಳ ವ್ಯಕ್ತಿಗಳಲ್ಲಿ, ಯೂದನ ಹಾಗೂ ಸನ್ಹೆದ್ರಿನ ಒಳಸಂಚುಗಳಲ್ಲಿ ಹಾಗೂ ಶಿಲುಬೆಯ ಸುತ್ತಲೂ ಎದ್ದ ದ್ವೇಷದಲ್ಲಿಯೂ ಹಿಂದಿರುಗಲಿಕ್ಕಿದ್ದನು. ಆದರೆ "ಸರ್ವ ವಿಷಯಗಳಲ್ಲಿ ನಮ್ಮ ಹಾಗೆ ಶೋಧನೆಗೆ ಗುರಿಯಾದನು, ಪಾಪ ಮಾತ್ರ ಮಾಡಲಿಲ್ಲ" (ಇಬ್ರಿಯ 4:15) ಇಂಥವನ ಸ್ಥಿರವಾದ ಪ್ರಾಣಕ್ಕೆ ವಿರುದ್ಧವಾಗಿ ಯಾವ ದಾಳಿಯೂ ನಿಲ್ಲಲಾರದು.

---

ಟಿಪ್ಪಣಿಗಳು

[1]ಲೂಕ 2:49. [2]ಲೂಕ 2:52. [3]ಅಥವಾ ನಾಜಿರಿಟ್. [4]ಮತ್ತಾಯ 3:2; 4:17; ನೋಡಿರಿ ಮಾರ್ಕ 1:14ಬಿ, 15. [5]ಮತ್ತಾಯ 3:14. [6]ಮತ್ತಾಯ 3:17. [7]Geikie's "Life of Christ," Vol, I., p. 413. [8]ಮತ್ತಾಯ 4:3; ಲೂಕ 4:3. [9]ಮತ್ತಾಯ 20:28; ಮಾರ್ಕ 10:45. [10]ಮತ್ತಾಯ 4:6; ಲೂಕ 4:9.

[11]ಮತ್ತಾಯ 4:9; ಲೂಕ 4:7. [12]ಲೂಕ 4:13; ನೋಡಿರಿ ಮತ್ತಾಯ 4:11.

© 2009 Truth for Today